ರೀತಿ ಆಯೋಗವನ್ನು ಮಾಡಬೇಕೆಂದು ಸರ್ಕಾರದ ಮುಂದೆ ಪ್ರಸ್ತಾವನೆ ಇದೆ. ಇದರ ಕಾರ್ಯವ್ಯಾಪ್ತಿಯೇನು ಎಂದು ಕೇಳಿದ್ದಾರೆ. ನನಗೆ ತಿಳಿದಿರುವ ಮಾಹಿತಿಯ ಪ್ರಕಾರ, ಪರಿಶಿಷ್ಟ ಜಾತಿ ಮತ್ತು ಪಂಗಡವರ ಪಟ್ಟಿಯಲ್ಲಿ ಹಲವಾರು ಜಾತಿಗಳನ್ನು ಸೇರಿಸಲು ವಿವಿಧ ಸಂಸ್ಥೆಗಳು ಮನವಿಯನ್ನು ಪರಿಶೀಲಿಸುವುದು, ಎರಡನೆಯದಾಗಿ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜಾತಿಯ ಪಟ್ಟಿಗೆ ಸೇರ್ಪಡೆ ಮಾಡಬೇಕಾಗಿರುವ ಜಾತಿಯ ಜನಾಂಗದವರ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು. ಮೂರನೆಯದಾಗಿ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ವ್ಯಕ್ತಿಗಳು ಸುಳ್ಳು ಜಾತಿ ಪತ್ರವನ್ನು ಪಡೆಯುವುದನ್ನು ತಡೆಯುವ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರಕ್ಕೆ ಸಲಹೆ ಮಾಡುವುದು. ನಾಲ್ಕನೆಯದಾಗಿ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಅದರ ಅಭಿವೃದ್ಧಿಗಾಗಿ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರಕ್ಕೆ ಸಲಹೆಯನ್ನು ಮಾಡಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಇದನ್ನು ಮಾಡಬೇಕೋ ಬೇಡವೋ ಎಂಬ ಬಗ್ಗೆ ಅಂತಿಮ ನಿರ್ಣಯವನ್ನೂ ಆಗಿಲ್ಲ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಆಶ್ರಯ ಅಂಬೇಡ್ಕರ್ ಮನೆಗೆ ಹಣ ಬಿಡುಗಡೆ

102 - ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದೆ ಮಂಜೂರು ಮಾಡದ ಆಶ್ರಯ ಅಂಬೇಡ್ಕರ್ ಮನೆಗಳಿಗೆ ಹಣ ಬಿಡುಗಡೆ ಮಾಡದೆ ಇತ್ತೀಚೆಗೆ ಮಂಜೂರು ಮಾಡಿದ ಮನೆಗಳಿಗೆ ಹಣ ಬಿಡುಗಡೆ ಮಾಡಿರುವ ಔಚಿತ್ಯವೇನು?

ಆ) ಆರ್ಥಿಕವಾಗಿ, ಹಿಂದುಳಿದವರಿಗೆ ಮನೆ ಮಂಜೂರಾಗಿ ಒಂದು ವರ್ಷಕ್ಕೂ ಹೆಚ್ಚು ಸಮಯವಾದರೂ ಹಣ ಬಿಡುಗಡೆ ಮಾಡಿರುವುದು ನಿಜವೇ?

ಶ್ರೀ ಬಸವರಾಜರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) **ರಾಜ್ಯದ ಕಾರ್ಯಕ್ರಮ ಭೌತಿಕ ಗುರಿ:**

	ಆಶ್ರಯ	ಅಂಬೇಡ್ಕರ್	ಇಂದಿರಾ ಆವಾಜ್
1993-94	1,06,000	22,134	12,103
1994-95	1,50,000	12,500	14,652
1995-96	60,000	25,000	44,000

1994 ಸೆಪ್ಟೆಂಬರ್ 5 ರಂದು ಸರ್ಕಾರಿ ಆಜ್ಞೆ ಪಿಹೆಚ್‌ಎಸ್ - 109 ಆಶ್ರಯ ಯೋಜನೆ ಅಡಿ 1.50 ಲಕ್ಷ ಮನೆಗಳಿಗೆ ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಮನೆಗಳು ಮಂಜೂರು

ಮಾಡಲಾಗಿತ್ತು. ಈ ಯೋಜನೆಗಳಲ್ಲಿ ಪ್ರತಿ ಮನೆಗೆ ರೂ. 15,000-00 ರೂ.ಗಳಂತೆ, ಮನೆಗಳನ್ನು ಪೂರ್ತಿ ಗೊಳಿಸ ರೂ.225-00 ಕೋಟಿ ಬೇಕಾಗುತ್ತದೆ. ಆದರೆ, 1994-95 ಸಾಲಿನಲ್ಲಿ ಕೇವಲ 16.63 ಲಕ್ಷ ರೂ ಮಾತ್ರ ಬಿಡುಗಡೆ ಮಾಡಲಾಯಿತು. ಬಾಕಿ ಉಳಿದ ಹಣ ಬಿಡುಗಡೆಯ ಮಾಡಲು 1994-95 ಸಾ ರಾಜ್ಯ ಅಯವ್ಯಯದಲ್ಲಿ ಒದಗಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ 1995-96 ಸಾಲಿನಲ್ಲಿ ಅಯ ್ಯ ಅನುಗುಣವಾಗಿ 1994-95 ಸಾಲಿನ ಗುರಿಯನ್ನು ಸೇರಿಸಿಕೊಂಡು 1995-96 ಸಾಲಿಗೆ 6 J00 ಮನೆಗಳ ಗುರಿಯನ್ನು ನಿರ್ಧರಿಸಲಾಯಿತು.

ಜಿಲ್ಲೆಗಳಿಗೆ ಹಣ ಬಿಡುಗಡೆ ವಿವರ

	ಆಶ್ರಯ	ಅಂಬೇಡ್ಕರ್	ಇಂದಿರಾ ಆವಾಜ್
1993-94	14228.00	3320.00	178.00
1994-95	1663.32	187 .00	2080.00
1995-95	2 268.00	3230.00	3024.00
	ದಕ್ಷಿಣ ಕನ್ನಡ ಜಿಲ್ಲೆಗೆ ಭೌತಿಕ ಗುರಿ		
1993-94	6320	1 25	202
1994-95	6409	1770	8
1995-96	2800	1551	1330
	ಹಣ ಬಿಡುಗಡೆ ವಿವರ		
1993-94	949.35	223.75	38.30
1994-95	643.49	153.59	80.00
1995-96	730.00	221.00	94.00

ಆ) ಮನೆಗಳ ಪ್ರಗತಿಯನ್ನಾಧರಿಸಿ ಹಂತ ಹಂತವಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಹಣವನ್ನು ಬಿಡುಗಡೆ ಮಾಡಿರುವ ಬಗ್ಗೆ ವರದಿಯನ್ನು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಯಾವ್ಯಾವ ಸಮಯದಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂಬ ಬಗ್ಗೆ ನಿಗದಿತವಾಗಿ ತಿಳಿಸಿಲ್ಲ. ಎರಡನೆಯದಾಗಿ 1993-94, 94-95, 95-96ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಕ್ರಮವಾಗಿ 6320,6409,2800 ಮನೆಗಳನ್ನು ಕೊಟ್ಟಿದ್ದೀರಿ, ಅಷ್ಟು ಕಡಿಮೆ ಕೊಡಲು ಕಾರಣವೇನು? ದಕ್ಷಿಣ ಕನ್ನಡ ಜಿಲ್ಲೆಗೆ ಹಣವನ್ನು ಬಿಡುಗಡೆ ಮಾಡಿರುವ

ವಿಚಾರವನ್ನು ಹೇಳಿದ್ದೀರಿ. ಯಾವಾಗ ಅದನ್ನು ಬಿಡುಗಡೆ ಮಾಡಿದ್ದೀರಿ? ನಾವು ಯಾವುದೇ ತಾಲ್ಲೂಕು ಕೇಂದ್ರದಲ್ಲಿ ಕೇಳಿದರೂ ಅಲ್ಲಿ ಹಳೆಯ ಮನೆಗಳಿಗೆ ಹಣ ಬಿಡುಗಡೆಯಾಗಿದೆ ಎಂದು ಹೇಳತಕ್ಕ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಇಲ್ಲಿ ತಾವು ಲಿಖಿತವಾಗಿ ಏನು ಉತ್ತರ ಕೊಡುತ್ತೀರಿ ಅದರಂತೆ ನಾವು ಅಲ್ಲಿ ಹೋದರೆ ಹಣವೇ ಇರುವುದಿಲ್ಲ. ಇದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಹೇಳಬೇಕು.

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಗೆ 1993-94 ಮತ್ತು 1994-95ನೇ ಸಾಲಿಗೆ ಒಟ್ಟು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂಬುದನ್ನು ಸ್ಪಷ್ಟವಾಗಿ ನಾವಿಲ್ಲಿ ಹೇಳಿದ್ದೇವೆ. 1993-94 ಮತ್ತು 1994-95 ಎರಡೂ ಆರ್ಥಿಕ ವರ್ಷಗಳು ಸೇರಿ ಹಿಂದಿನ ಸರ್ಕಾರ ಇದ್ದ ಸಂದರ್ಭದಲ್ಲಿ ಪ್ರತಿ ಮನೆಗೆ 15 ಸಾವಿರ ರೂಪಾಯಿಗಳಂತೆ 1 ಲಕ್ಷ 6 ಸಾವಿರ ಮನೆಗಳನ್ನು ಕಟ್ಟಲು ಮಂಜೂರು ಮಾಡಿರುವುದಕ್ಕೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಜಿಲ್ಲೆಗೆ ನಾವು ಸಂಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡಲಾಯಿತು ಎಂದು ಕೇಳಿದ್ದಾರೆ. ಆ ಜಿಲ್ಲಾ ಪಂಚಾಯತಗೆ ಯಾವ ಯಾವ ತಿಂಗಳಿನಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂಬುದನ್ನು ಬೇಕಾದರೆ ನಾನು ತರಿಸಿಕೊಡುತ್ತೇನೆ. ಮಾನ್ಯ ಸದಸ್ಯರು ಮತ್ತೊಂದು ಉಪ ಪ್ರಶ್ನೆ ಕೇಳಿದ್ದಾರೆ. 1993-94, 1994-95 ಮತ್ತು 1995-96ನೇ ಸಾಲಿನಲ್ಲಿ ನೀವು ಮೇಲೆ ಎರಡು ವರ್ಷದಲ್ಲಿ ಮನೆಗಳನ್ನು ಜಾಸ್ತಿ ಕಟ್ಟಿದ್ದೀರಿ, ಈ ವರ್ಷ ಕಡಿಮೆ ಕಟ್ಟಿದ್ದೀರಿ ಎಂಬ ಮಾತನ್ನು ಅವರು ಹೇಳಿದ್ದಾರೆ. ಮಾನ್ಯ ಸದಸ್ಯರು ಬಹುಶಃ ತಾವೂ ಕೂಡ ಹಿಂದೆ ವಿಧಾನ ಸಭಾ ಸದಸ್ಯರು ಆಗಿದ್ದದವರು. ತಮಗೆಲ್ಲಾ ಗೊತ್ತಿದೆ. 1993-94ನೇ ಸಾಲಿನಲ್ಲಿ ಹಿಂದಿದ್ದ ಸರ್ಕಾರ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿ ಆಗಿ ಇರತಕ್ಕ ಸಂದರ್ಭದಲ್ಲಿ ಅವರ ಸರ್ಕಾರ ಈ ಯೋಜನೆ ಪ್ರಾರಂಭ ಮಾಡಿದ ಮೇಲೆ ಎರಡು ಲಕ್ಷ ಮನೆ ಕಟ್ಟಿದರು. ಹಣ ಇಲ್ಲವೆಂದು ಹೇಳಿ ಮತ್ತೆ ರಿವೈಸ್ ಮಾಡಿ 6 ಸಾವಿರಕ್ಕೆ ತಂದರು. ಅದನ್ನು ಒಂದು ವರ್ಷದಲ್ಲೇ ಮುಗಿಸಲಿಲ್ಲ. ಮೂರು ವರ್ಷ ಅದು ಕಂಟಿನ್ಯೂ ಆಯಿತು. ಸಂಪೂರ್ಣ ಹಣ ಬಿಡುಗಡೆ ಮಾಡಲಿಲ್ಲ. 3 ವರ್ಷದಲ್ಲಿ 1 ವರ್ಷ 6ಸಾವಿರ ಮನೆ ಈಗ ಮುಂದಿನ ಮಾರ್ಚಿಯೊಳಗಾಗಿ ಕಂಪ್ಲೀಟ್ ಆಗುತ್ತಿದೆ. ಮಾನ್ಯ ವೀರಪ್ಪ ಮೊಯಿಲಿಯವರ ಸರ್ಕಾರ ದಿನಾಕ 5ನೇ ಸೆಪ್ಟೆಂಬರ್ 1994ರಲ್ಲಿ ಒಂದು ಆಜ್ಞೆ ಹೊರಡಿಸಿತು. ಆ ಆಜ್ಞೆಯಲ್ಲಿ 1 ಲಕ್ಷ 50 ಸಾವಿರ ಮನೆಗಳಿಗೆ ಕಟ್ಟಲು ಮಂಜೂರಾತಿ ನೀಡಲಾಗಿದೆ. ಪ್ರತಿ ಮನೆಗೆ ಅವತ್ತಿನ ಯೂನಿಟ್ ಕಾಸ್ಟ ಪ್ರಕಾರ 15 ಸಾವಿರ ರೂಪಾಯಿಗಳಂತೆ 1 ಲಕ್ಷ 50 ಸಾವಿರ ಮನೆಗಳಿಗೆ ಒಟ್ಟು 225 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ ಕೇವಲ 16 ಕೋಟಿ ರೂ.ಗಳನ್ನು ಮಾತ್ರ ಆ ಸರ್ಕಾರ ಬಿಡುಗಡೆ ಮಾಡಿತು. ನಂತರ ಚುನಾವಣೆಯಾಗಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿತು. ಇದಕ್ಕೆ ಉಳಿದಂತಹ ಹಣವನ್ನು ಬಿಡುಗಡೆ ಮಾಡುವುದಕ್ಕೆ ಬಡ್ಜೆಟ್‌ನಲ್ಲಿ ಪ್ರಾವಿಷನ್ ಮಾಡಿಲ್ಲ. ನಾವು ಹೇಗೆ ಹಣ ಬಿಡುಗಡೆ ಮಾಡುವುದಕ್ಕಾಗುತ್ತದೆ. ಸುಮ್ಮನೆ ಬಿಳಿ ಕಾಗದದಲ್ಲಿ 16ಕೋಟಿ ರೂ.ಗಳನ್ನು ಕೊಟ್ಟು 225ಕೋಟಿ ರೂ.ಗಳಿಗೆ ಆರ್ಡರ್ ಹೊರಡಿಸಿದರು. ಹಣದ ಪ್ರಾವಿಷನ್ ಮಾಡಿದ್ದಾರೋ ಇಲ್ಲವೋ ಎಂಬುದನ್ನು ನೋಡದೇ, ಎಷ್ಟು ಹಣ ಇದೆ ಎನ್ನುವ ವಿವರ ಇಲ್ಲದೇ ಇಷ್ಟೆಲ್ಲಾ ಹೊರಡಿಸಿದ್ದರಿಂದ ಬಹಳ ತೊಂದರೆಯಾಯಿತು. ಆದುದರಿಂದ ಹೊಸ ಸರ್ಕಾರ ಬಂದಾಗ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಾವು 60 ಸಾವಿರ ಮನಗೆಳಿಗೆ

ನಿಗದಿಗೊಳಿಸಿದ್ದೇವೆ. ಅದರ ಜೊತೆಗೆ 1 ಲಕ್ಷ 50 ಸಾವಿರ ಮನೆಗಳು ಪ್ರಾರಂಭವಾಗಿರಲಿಲ್ಲ. ಹೆಚ್ಚು ಕಡಿಮೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಲ್ಪ ಪ್ರಾರಂಭವಾಗಿತ್ತು. ನಿಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾವು ಎಷ್ಟು ಪ್ರಾರಂಭ ಮಾಡಿದ್ದೇವೆ ಎಂದರೆ 2800 ನಮೆಗೆ ಟಾರ್ಗೆಟ್ ಇದ್ದರೂ ಕೂಡ ನಾವು ಅವೆಲ್ಲಕ್ಕೂ ಸಂಪೂರ್ಣ ಹಣ ಕೊಡಬೇಕೆಂದು ಈ ಸರ್ಕಾರ ತೀರ್ಮಾನ ಮಾಡಿದೆ. ಈಗಾಗಲೇ ನಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮನೆಗಳನ್ನು ಮುಗಿಸಲು ಹಣ ಕೊಟ್ಟಿದ್ದೇವೆ. ಸುಮಾರು 6059 ಮನೆಗಳನ್ನು ಇನ್ನೂ ಪೂರೈಸಬೇಕಾಗಿದೆ. ಅವುಗಳಿಗೆ ಪ್ರತಿ ಮನೆಗೆ 15 ಸಾವಿರ ರೂ.ಗಳಂತೆ ಇನ್ನೂ 3 ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಅದಕ್ಕೆ ಸಂಪೂರ್ಣವಾದ ಹಣವನ್ನು ಒದಗಿಸಿಕೊಡುತ್ತೇನೆ ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಈಗಾಗಲೇ 6 ಕೋಟಿ ರೂ.ಗಳನ್ನು ಇದಕ್ಕೆ ನಾವು ಬಿಡುಗಡೆ ಮಾಡಿದ್ದೇವೆ. ಆ ಹಣ ಖರ್ಚಾದ ಬಗ್ಗೆ ಯುಟಿಲೈಸೇಷನ್ ಸರ್ಟಿಫಿಕೇಟ್ ಬಂದಿಲ್ಲ. ಅದು ಬಂದ ತಕ್ಷಣ ಉಳಿದ ಹಣ ಬಿಡುಗಡೆ ಮಾಡಲಾಗುವುದು ಎಂದು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಒಂದು ವಿಚಾರ ಹೇಳಲಿಕ್ಕೆ ಬಯಸುತ್ತೇನೆ. ಯುಟಿಲೈಸೇಷನ್ ಸರ್ಟಿಫಿಕೇಟ್ ಬಂದಿಲ್ಲ ಎಂದು ಹೇಳುತ್ತೀರಿ. ನಿಮ್ಮ ಅಧಿಕಾರಿಗಳಿಗೆ ಅದನ್ನು ಕಳುಹಿಸುವುದಕ್ಕೆ ನೀವು ಹೇಳಿಲ್ಲವೇ? ಮನೆಗಳಿಗೆ ಅವರೇನು ಹಣ ಕೊಟ್ಟಿಲ್ಲವೇ? ಅದಕ್ಕೆ ಜವಾಬ್ದಾರಿ ಯಾರು? ಅಲ್ಲಿ ಮನೆ ಆಗಿದೆಯೋ ಇಲ್ಲವೋ ಎಂದು ನಿಮಗೆ ತಿಳಿದುಕೊಳ್ಳುವುದಕ್ಕಾಗುವುದಿಲ್ಲವೇ? ತಾವು ವಸತಿ ಸಚಿವರಲ್ಲವೇ? ಅಲ್ಲಿ ಏನಾಗಿದೆ ಎನ್ನತಕ್ಕಂಥದನ್ನು ತಾವು ತಿಳಿಯಬೇಕು, ಅದರ ಬಗ್ಗೆ ರಿಪೋರ್ಟ್ ತರಿಸಬೇಕು, ಆ ಹಣವನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಯುಟಿಲೈಸೇಷನ್ ಸರ್ಟಿಫಿಕೇಟ್ ಬಂದಿಲ್ಲ, ಆದ್ದರಿಂದ ಹಣ ಬಿಡುಗಡೆ ಮಾಡಿಲ್ಲ ಎನ್ನತಕ್ಕಂಥ ಹಾರಿಕೆಯ ಉತ್ತರ ಸರಿಯಲ್ಲ. ನನ್ನ ಪ್ರಶ್ನೆಗೆ ಉತ್ತರಿಸುತ್ತಾ ತಾವು ಮತ್ತೊಂದು ಉತ್ತರ ಕೊಟ್ಟಿರಿ. ಹಿಂದಿನ ಸರ್ಕಾರ ಏನೋ ಒಂದೂವರೆ ಲಕ್ಷ ಮನೆಗಳನ್ನು ಮಂಜೂರಾತಿ ಮಾಡಿದೆ, ಅದಕ್ಕೆ ಕೇವಲ 16 ಕೋಟಿ ರೂಪಾಯಿಗಳನ್ನು ಅದು ಬಿಡುಗಡೆ ಮಾಡಿದೆ ಎಂದು ತಾವು ಹೇಳಿದಿರಿ. ಅದು ನಿಮ್ಮ ಸಮಸ್ಯೆ. ಅಧಿಕಾರಕ್ಕೆ ನೀವು ಬರುತ್ತೀರಿ ಎಂದು ಹೇಳಿ ಆ ಮನೆಗಳನ್ನು ಮಂಜೂರು ಮಾಡಿದ್ದಲ್ಲ. ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಭಾವಿಸಿ ಮಂಜೂರಾತಿ ನೀಡಿದ್ದುದು. ಆದರೆ ನಾವು ಅಧಿಕಾರಕ್ಕೆ ಬರಲಿಕ್ಕೆ ಸಾಧ್ಯವಾಗಲಿಲ್ಲ. ಈಗ ಆ ಸಮಸ್ಯೆಯನ್ನು ನೀವು ತೆಗೆದುಕೊಂಡಿದ್ದೀರಿ. ಆ ಸಮಸ್ಯೆಯನ್ನು ನೀವು ಜನರಿಗೆ ವರ್ಗಾಯಿಸುವುದು ಸರಿಯಲ್ಲ.

ಅಧ್ಯಕ್ಷರು : ನೀವು ಹುಟ್ಟಿ ಹಾಕಿದ ಸಮಸ್ಯೆಯನ್ನು ಅವರು ಪರಿಹರಿಸಬೇಕು ಎನ್ನುತ್ತೀರಾ?

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಅದು ಯಾರು ಹುಟ್ಟಿ ಹಾಕಿದ ಸಮಸ್ಯೆ ಇರಬಹುದು. ಅದನ್ನು ಅವರು ಪರಿಹಾರ ಮಾಡಲಿಕ್ಕೋಸ್ಕರ ಜನಗಳಿಗೆ ಸವಾಲನ್ನು ಕೊಡುತ್ತಾರೆ. ಆ ಸವಾಲನ್ನು ತಾವು ಎದುರಿಸಿ ಮನೆ ಮಂಜೂರಾತಿ ಮಾಡಬೇಕು. ಇವತ್ತು ತಾಲ್ಲೂಕು ಪಂಚಾಯಿತಿ ಸಮಿತಿಯಿಂದ ಅರ್ಹ ಫಲಾನುಭವಿಗಳ ಆಯ್ಕೆ ಆಗುತ್ತದೆ.

ಅಧ್ಯಕ್ಷರು : ರಾಜ್ಯಪಾಲರ ವಂದನಾ ನಿರ್ಣಯದ ಪ್ರಸ್ತಾವದ ಮೇಲೆ ಚರ್ಚೆ ನಡೆಯುವಾಗ ತಾವು ಈ ಅಂಶಗಳನ್ನು ಪ್ರಸ್ತಾಪಿಸಬಹುದು. ಈಗ ಆ ಅಸ್ಪೆಕ್ಟ್‌ಗೆ ಹೋಗುವುದು ಬೇಡ. ತಾವು ಇನ್ನೊಂದು ಮಾಡಬೇಕಾಗುತ್ತದೆ. ಮೊದಲ ಯೂನಿಟ್ ಕಾಸ್ಟ 15 ಸಾವಿರ ಇತ್ತು. ಈಗ 20 ಸಾವಿರ ಮಾಡುತ್ತಿದ್ದಾರೆ. ಈಗ ಕೆಲವೆಲ್ಲಾ ಮನೆಗಳು ನಿರ್ಮಾಣವಾಗುತ್ತಿರುವುದರಿಂದ ಆ ವ್ಯತ್ಯಾಸ ಕಾಣುತ್ತಿದೆ. ದಯಮಾಡಿ ಆ 5 ಸಾವಿರ ರೂ.ಗಳನ್ನು ಮಾನ್ಯ ವಸತಿ ಸಚಿವರು ಇವರಿಗೂ ಎಕ್ಸ್‌ಟೆಂಡ್ ಮಾಡಿ ಕೊಡಿ. ಮೊದಲು ಸ್ಯಾಂಕ್ಷನ್ ಮಾಡಿರತಕ್ಕ ಫಲಾನುಭವಿಗಳು ಯಾರಿದ್ದಾರೆ, ಅವರಿಗೂ ಕೂಡ ಆ 5 ಸಾವಿರ ರೂ.ಗಳನ್ನು ಎನಹ್ಯಾನ್ಸ್ ಮಾಡಿಕೊಡಿ. ನಾವು ಈ ಪ್ರಶ್ನೆಯ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಗೊಳಿಸೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದು ಕೇವಲ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಸಮಸ್ಯೆ ಅಲ್ಲ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಸಮಸ್ಯೆ ಇದು. ಎಲ್ಲಾಕಡೆಗೂ ಇದೇ ರೀತಿಯ ಸಮಸ್ಯೆಯಾಗಿದೆ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೇ, ಬಡವರು ತಮ್ಮ ಮನೆಗಳನ್ನು ಅರ್ಧಂಬರ್ಧ ಕಟ್ಟಿದ್ದಾರೆ. ಅವರು ಅವುಗಳನ್ನು ಪೂರ್ತಿಗೊಳಿಸಲು ಸರ್ಕಾರ ಸೌಜನ್ಯ ತೋರಿಸಿ ದುಡ್ಡು ಬಿಡುಗಡೆ ಮಾಡತಕ್ಕ ಕೆಲಸ ಮಾಡಲಿ ಎಂದು ಕೋರುತ್ತೇನೆ. ಈ ಬಗ್ಗೆ ಅವರಿವರನ್ನು ದೂರಿಕೊಂಡು ಈ ಕೆಲಸವನ್ನು ನಾವು ಮುಂಡೂಡುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಇರಲಿ, ಆ ಸರ್ಕಾರ ಇರಲಿ..

ಅಧ್ಯಕ್ಷರು : ಆಯಿತು, ಅವರು ಸರಿಯಾಗಿ ಮಾಡಲಿಲ್ಲ ಎಂದು ನಿಮ್ಮನ್ನು ತಂದಿದ್ದಾರಲ್ಲಾ.

ಶ್ರೀ ಬಿ. ರಮಾನಾಥ ರೈ : ಅವರು ಹಾಗೆ ಮಾಡಿದರು, ಇವರು ಹೀಗೆ ಮಾಡಿದರು ಎಂದು ಅಸಂಬದ್ಧವಾದ ಮಾತುಗಳನ್ನು ಹೇಳುತ್ತಾ ಮನೆ ಪೂರ್ತಿಯಾಗದಂತೆ ಮಾಡುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಬಗ್ಗೆ ಬಹು ಜನರ ಒತ್ತಾಯ ಇದೆ. ಮಾನ್ಯ ಅಧ್ಯಕ್ಷರೂ ಸಹ ಈ ಬಗ್ಗೆ ಸಲಹೆ ಕೊಟ್ಟಿದ್ದಾರೆ. ದಯಮಾಡಿ 5 ಸಾವಿರ ರೂ.ಗಳನ್ನು ಹೆಚ್ಚು ಕೊಟ್ಟು ಆ ಮನೆಗಳನ್ನು ಪೂರ್ಣ ಮಾಡತಕ್ಕ ಕೆಲಸ ಮಾಡಿ ಪುಣ್ಯ ಕಟ್ಟಿಕೊಳ್ಳಿ.

ಅಧ್ಯಕ್ಷರು : ಇದೇ ರೀತಿಯ ಸಮಸ್ಯೆ ನಮ್ಮ ಕ್ಷೇತ್ರದಲ್ಲೂ ಇದೆ.

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಪ್ರತಾಪಚಂದ್ರ ಶೆಟ್ಟಿಯವರು ಒಂದು ಮಾತನ್ನು ಹೇಳಿದರು. ಹಿಂದಿನ ಸರ್ಕಾರ ಎಷ್ಟು ಮನೆಗಳನ್ನು ಸಾಂಕ್ಷನ್ ಮಾಡಿತ್ತೋ, ಅದನ್ನೆಲ್ಲಾ ಪೂರ್ತಿಗೊಳಿಸುವುದು ಈ ಸರ್ಕಾರದ ಕರ್ತವ್ಯವಾಗಿದೆ, ಆ ಸಮಸ್ಯೆಯಮ್ನು ನೀವೇ ಬಗೆಹರಿಸಬೇಕು ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮುಖೇನ ಅವರನ್ನು ಕೇಳುತ್ತೇನೆ. ಈಗ 19 ಲಕ್ಷ ಜನರಿಗೆ ಮನೆಯಿಲ್ಲ ಎಂದು ಸರ್ವೆ ಮಾಡಿಸಿದ್ದೇನೆ, 19 ಲಕ್ಷ ಜನರಿಗೆ ಪ್ರತಿ ಮನೆಗೆ 20 ಸಾವಿರದಂತೆ ಮನೆಗಳನ್ನು ಕಟ್ಟಬೇಕಾದರೆ ಒಟ್ಟು 4 ಸಾವಿರ ಕೋಟಿ ರೂ.ಗಳು ಬೇಕು.

ಮುಂದಿನ ತಿಂಗಳು ಪಾರ್ಲಿಮೆಂಟ್ ಚುನಾವಣೆ ಬರುತ್ತದೆ ಎಂದು ಹೇಳಿ ನಾನು 19ಲಕ್ಷ ಮನೆಗಳನ್ನು ಕಟ್ಟಲು ಮಂಜೂರಾತಿ ನೀಡಿ, ಈ ಮೂರು ವರ್ಷದಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಆಗಲಿಲ್ಲ, ಮುಂದೆ ಯಾವುದೋ ಬೇರೆ ಸರ್ಕಾರ ಬಂದಿತು ಎಂದು ಹೇಳಿ, 4 ಸಾವಿರ ಕೋಟಿ ರೂ. ಖರ್ಚು ಮಾಡಿ ಮನೆಗಳನ್ನು ಕಟ್ಟಿಸುವುದು ನಿಮ್ಮ ಸಮಸ್ಯೆ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಚುನಾವಣೆ ಸಂದರ್ಭದಲ್ಲಿ ಸೆಪ್ಟೆಂಬರ್ 5ನೇ ತಾರೀಖು ಹಿಂದಿನ ಸರ್ಕಾರ ಆಜ್ಞೆ ಮಾಡಿದೆ. ಅಕ್ಟೋಬರ್ ತಿಂಗಳಿನಲ್ಲಿ ಚುನಾವಣೆ ನಡೆಯುವುದರಲ್ಲಿತ್ತು. 225 ಕೋಟಿ ರೂ.ಗಳ ಯೋಜನೆಗೆ.

ಶ್ರೀ ಬಿ. ರಮಾನಾಥ ರೈ : ಹಳೆಯ ಮನೆಗಳನ್ನು ಅರ್ಧಂಬರ್ಧ ಕಟ್ಟಿದ್ದಾರೆ. ಅದಕ್ಕೇನಾದರೂ ದುಡ್ಡು ಕೊಟ್ಟಿದ್ದೀರಾ? ಹೊಸ ಮನೆ ವಿಚಾರ ಬಿಟ್ಟು ಬಿಡಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರ ಬ[illegible]ರ ಮೇಲೆ ಕಳಕಳಿ ಇಟ್ಟು 1 ಲಕ್ಷ 50 ಸಾವಿರ ಮನೆಗಳನ್ನು ಮಂಜೂರು ಮಾಡಿರುವುದರ [illegible]ನಗೇನೂ ಆಕ್ಷೇಪಣೆ ಇಲ್ಲ. ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ಅದಕ್ಕೆ ಬೇಕಾದಂತಹ ಹ[illegible]ನ್ನು ಅಯವ್ಯಯದಲ್ಲಿ ಇಟ್ಟಿಲ್ಲದಿದ್ದರೆ ಯಾವ ಸರ್ಕಾರ ಅಧಿಕಾರಕ್ಕೆ ಬಂದರೂ ಏನೂ ಮಾಡುವುದಕ್ಕಾಗುವುದಿಲ್ಲ. ಇವರು ಅಧಿಕಾರಕ್ಕೆ ಬಂದಿದ್ದರೂ ಇವರೂ ಏನು ಮಾಡುವುದಕ್ಕಾಗುತ್ತಿರಲಿಲ್ಲ. ಎಲ್ಲಿಂದ ಹಣ ತರುತ್ತಾರೆ? ಹೌಸಿಂಗ್ ಸ್ಕೀಮನಲ್ಲಿ ಅಯವ್ಯಯದಲ್ಲಿ ಇದಕ್ಕೆ ಹಣವನ್ನೇ ಒದಗಿಸಿಕೊಡಲಾಗಿಲ್ಲ. ಆ ವಿವರಗಳು ಬೇಕಾದರೆ ನಾನು ಸದನದಲ್ಲಿ ಮಂಡಿಸುತ್ತೇನೆ, ಎಷ್ಟು ಹೋದ ವರ್ಷ ಬಡ್ಜೆಟರಿ ಪ್ರಾವಿಷನ್ ಮಾಡಿದ್ದರು? ಅಷ್ಟೂ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ. ಆದರೆ 225 ಕೋಟಿ ರೂ.ಗಳಷ್ಟು ಹಣ ಬೇಕಾದಂತಹ ಯೋಜನೆಗೆ ಕೇವಲ 16 ಕೋಟಿ ರೂ.ಗಳಿಗೆ ಮಾತ್ರ ಬಡ್ಜೆಟರಿ ಪ್ರಾವಿಷನ್ ಮಾಡಿದ್ದರೆ ನಾವು ಉಳಿದಂತಹ ಹಣವನ್ನು ಎಲ್ಲಿಂದ ತರಲು ಸಾಧ್ಯ?

ಶ್ರೀ ಬಿ.ಎಸ್. ಯಡಿಯೂರಪ್ಪ : 1994ರಿಂದ ಅರ್ಧಂಬರ್ಧ ಆಗಿರತಕ್ಕ ಮನೆಗಳಿಗೆ ಇನ್ನೂ 5 ಸಾವಿರ ರೂ.ಗಳನ್ನು ಕೊಡಿ ಎಂದು ನಾವು ಕೇಳುತ್ತಿದ್ದೇವೆ. ಎಲ್ಲಾ ಮಾಡಿ ಎಂದು ನಾವು ಕೇಳುತ್ತಿಲ್ಲ.

ಶ್ರೀ ಬಿ. ರಮಾನಾಥ ರೈ : ಈಗ ಅವರೇನು ಹಣ ಕೊಡುತ್ತಾರೆ, ಅದನ್ನು ಹೊಸ ಮನೆಗಳನ್ನು ಕಟ್ಟಲಿಕ್ಕೆ ಮಾತ್ರ ಕೊಡಬೇಕು ಎಂದು ಅವರು ಸೂಚನೆ ಕೊಟ್ಟಿದ್ದಾರೆ. ಏಕೆ ಹಳೆಯ ಮನೆಗಳನ್ನು ಪೂರ್ತಿ ಮಾಡಬಾರದು? ಮೊದಲು ಆ ಕೆಲಸ ಮಾಡಿ.

ಡಾ॥ ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಿ. ಬಡವರ ಮೇಲೆ ಈ ರೀತಿಯ ಅನ್ಯಾಯವನ್ನು ಮಾಡಬಾರದು. ನಾನು ನಿಮಗೆ ಈ

ಬಗ್ಗೆ ಕೆಲವೊಂದು ಉದಾಹರಣೆಗಳನ್ನು ಕೊಡುತ್ತೇನೆ. 300 ಮನೆಗಳನ್ನು ಮಂಜೂರು ಮಾಡಿದ್ದಾರೆ. 5 ಲಕ್ಷ ರ. ಹಣವನ್ನು ಬಿಡುಗಡ ಮಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಗೆ 55 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಹೊನ್ನಾವರಕ್ಕೆ 500 ಮನೆಗಳನ್ನು ಕಟ್ಟಲು ಮಂಜೂರಾತಿ ನೀಡಿ 8 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. 5 ಲಕ್ಷ ರೂ.ಗಳಲ್ಲಿ ಪ್ರತಿ ಮನೆಗೆ 20 ಸಾವಿರದಂತೆ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲು ಸಾಧ್ಯ? ಆ ಬಗ್ಗೆ ಕೇಳಿದ್ದಕ್ಕೆ ಅಧಿಕಾರಿಗಳು ಏನು ಉತ್ತರ ಹೇಳಿದರು ಎಂದರೆ, ಮೊದಲು 5 ಸಾವಿರ ರೂ.ಗಳನ್ನು ತೆಗೆದುಕೊಳ್ಳಿ ಎಂದರು. 5 ಲಕ್ಷ ರೂ. ಗಳನ್ನು 300 ಮನೆಗಳಿಂದ ಭಾಗಿಸಿದರೆ ಪ್ರತಿ ಮನೆಗೆ ರೂ. 2 ಸಾವಿರಕ್ಕಿಂತ ಇನ್ನೂ ಕಡಿಮೆಯೇ ಬರುತ್ತದೆ. ಹೀಗಿರುವಾಗ ಮನೆಗಳನ್ನು ಕಟ್ಟಲು ಹೇಗೆ ಸಾಧ್ಯ? ಆದ್ದರಿಂದ ಭಟ್ಕಳದಲ್ಲಿ ಕೇವಲ 23 ಫಲಾನುಭವಿಗಳಿಗೆ ಮಾತ್ರ ನೀವು ಸರ್ಟಿಫಿಕೇಟ್ ಕೊಡಿ, ಅದಕ್ಕಿಂತ ಹೆಚ್ಚು ಕೊಡಬೇಡಿ, ಅವರು ಅನ್ಯಾಯ ಮಾಡಿದರೆ ನಾವು ಅನ್ಯಾಯ ಮಾಡಲಿಕ್ಕೆ ತಯಾರಾಗಿಲ್ಲ ಎನ್ನುವಂತಹ ಮಾತನ್ನು ಹೇಳಬೇಕಾಯಿತು. ತಾವು ದಯವಿಟ್ಟು ದರ ಬಗ್ಗ ಗಮನ ಹರಿಸಬೇಕು. ಉತ್ತರ ಕನ್ನಡ ಜಿಲ್ಲೆಗೆ ಒಂದು ಸಾವಿರ ಮನೆಗಳಿಗೆ ಕೇವಲ 55 ಲಕ್ಷ ರೂ. ಬಿಡುಗಡೆ ಮಾಡಲಾಯಿತು. This hoax should stop ಬಡವರಿಗೆ ಮನೆ ಕಟ್ಟಿ ಕೊಡುತ್ತೇವೆ ಎಂದು ಸನ್ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಹಾಕಿದ ಅಡಿಗಲ್ಲು ಇವತ್ತು ಕೂಡ ಕೆಲವು ತಾಲ್ಲೂಕಿನಲ್ಲಿ ಹಾಗೇ ಇದೆ. ಯಾರಬೇಕಾದರೂ ಬರಬಹುದು, ನಾನು ತೋರಿಸುತ್ತೇವೆ.

ಅಧ್ಯಕ್ಷರು : ಹೋಕ್ಸ ಎಲ್ಲಿ ಕಮೆನ್ಸ್ ಆಗುತ್ತದೆ ಗೊತ್ತೇ? ಎಲೆಕ್ಷನ್ ಎಕ್ಸಪೆನ್ಸಸ್ ಸಬ್‌ಮಿಟ್ ಮಾಡುತ್ತೇವಲ್ಲಾ, ಎಲೆಕ್ಷನ್ ಕಮಿಷನ್‌ಗೆ ಅಲ್ಲಿಂದ ಕಮೆನ್ಸ್ ಆಗುತ್ತದೆ. ನಾವು ಹುಟ್ಟಿರುವುದೇ ಹೋಕ್ಸ್‌ನಲ್ಲಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನೂರಾರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಆದೇಶ ಕೊಟ್ಟಂತಹ ಮನೆಗಳಿಗೆ ಹಣ ಕೊಡತಕ್ಕಂತಹ ನೈತಿಕ ಜವಾಬ್ದಾರಿ ತಮ್ಮ ಮೇಲೆ ಇದೆ, ಯಾವುದೇ ಸರ್ಕಾರ ಇರಲಿ, ಯಾವುದೇ ರಾಜಕೀಯ ವ್ಯವಸ್ಥೆ ಇರಲಿ, ತಮ್ಮ ಇಲಾಖೆಯ ಅಧಿಕಾರಿಗಳು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಆದೇಶ ಕೊಟ್ಟಂತಹ ಮನೆಗಳಿಗೆ ಹಣವನ್ನು ತಾವು ಬಿಡುಗಡೆ ಮಾಡಲೇಬೇಕು. ಅದರಲ್ಲಿ ತಾರತಮ್ಯ ಮಾಡುವುದಾದರೆ ವರ್ಷದ ಮನೆಗಳಿಗೆ ಮಾತ್ರ ಹಣ ಬಿಡುಗಡೆ ಮಾಡುತ್ತೇವೆ, ಹಿಂದಿನ ಮನೆಗಳಿಗೆ ನಮಗೆ ಸಂಬಂಧ ಇಲ್ಲ ಎನ್ನತಕ್ಕಂಥ ವಾದವನ್ನು ಮಾಡುವುದಾದರೆ, ಇದರಲ್ಲಿ ಸಂಪೂರ್ಣವಾಗಿ ಯಾರೂ ಆರ್ಥಿಕವಾಗಿ ಹಿಂದುಳಿದ ಜನರಲ್ಲಿ ತಾವು ರಾಜಕಾರಣ ಮಾಡುತ್ತೀರಿ, ಎನ್ನತಕ್ಕಂತಹ ಆಪಾದನೆಯನ್ನು ಮಾಡಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ಸರ್ಕಾರೀ ಆಜ್ಞೆಯನ್ನಾಗಲಿ ಅಥವಾ ನಾನು ಹೇಳುವುದನ್ನು ಅವರು ಅರ್ಥ ಮಾಡಿಕೊಳ್ಳುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಬಾಯಿಯಿಂದ ಅರ್ಧಂಬರ್ಧ ಆಗಿರುವ ಮನೆ 1996 ರಿಂದ ಐದು ಸಾವಿರ ರೂಪಾಯಿ ಕೊಟ್ಟು ಪೂರ್ತಿ ಮಾಡುತ್ತೇವೆಂದು ಹೇಳುವುದಕ್ಕೆ ಏನು ಸ್ವಾಮಿ?

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೆ, ಸ್ಟಿಲ್ ಓವರ್ ವರ್ಕ್ ಏನೇನು ಇವೆ ಅವುಗಳಿಗೆ ಸಂಪೂರ್ಣ ಹಣ ಬಿಡುಗಡೆ ಮಾಡುತ್ತೇವೆ, ಮಾರ್ಚ 31ರ ಒಳಗೆ ಖಂಡಿತ ಬಿಡುಗಡೆ ಮಾಡುತ್ತೇವೆ.